ಶನಿವಾರ, ಜನವರಿ 13, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 13 | ಪುಟ 20 + 4 + 4 • www.prajavani.net f /prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಭೂಮಿಕಾ
ಊರದನಗಳ ಕುರಿತ ನೂರೆಂಟು ನೆನಪುಗಳು...

ಬಾಣಂತಿ ಸಾವಿಗೆ ಕೊನೆ ಇಲ್ಲವೇ? 6

ಮಲ್ಯಗೆ ಏ.2ರ ವರೆಗೆ ಜಾಮೀನು 11

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 34,592 | 10,681 | ₹30,006 (ಬೆಂಗಳೂರು) | ₹39,200 (ಬೆಂಗಳೂರು) | 63.63 |




## ಆಳ್ವಾಸ್ ವಿರಾಸತ್

ಮೂಡುಬಿದಿರೆಯಲ್ಲಿ ಶುಕ್ರವಾರ ಆರಂಭಗೊಂಡ ಆಳ್ವಾಸ್ ವಿರಾಸತ್-2018 ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವವನ್ನು ನಾಗಲ್ಯಾಂಡ್ ರಾಜ್ಯಪಾಲ ಪಿ.ಬಿ.ಆಚಾರ್ಯ ಅವರು ಉದ್ಘಾಟಿಸಿದರು. ಆಳ್ವಾಸ್ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ, ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಪದ್ಮಭೂಷಣ ಪಂಡಿತ್ ರಾಜನ್ ಮಿಶ್ರಾ, ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ, ಶಾಸಕ ಅಭಯಚಂದ್ರ ಜೈನ್, ಸಂಸದ ನಳಿನ್ ಕುಮಾರ್ ಕಟೀಲು, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರಕುಮಾರ್ ಪಾಲ್ಗೊಂಡಿದ್ದರು. ಪ್ರಜಾವಾಣಿ ಚಿತ್ರ

ಶನಿವಾರ, 13 ಜನವರಿ 2018 | ಪುಟಗಳು: 20+4+6 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 168
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿ
PRID
VK
ವಿಜಯ ಕರ್ನಾಟಕ



ಮದುವೆ ಆದ ಮೇಲೆ ಸೌಂದರ್ಯ ಕೆಡುತ್ತೆ ಅನ್ನುವುದು ಸುಳ್ಳು: ನಟಿ ಸುರ್ವೀನ್ ಚಾವ್ಲಾ



ಬಿಲ್ ಪಾವತಿಸದ ಕಾರಣ ನೀಡಿ ಆಸ್ಪತ್ರೆಯಲ್ಲಿ ರೋಗಿಗಳ ದಿಗ್ಬಂಧನ ಅಕ್ರಮ: ಮುಂಬಯಿ ಹೈಕೋರ್ಟ್ ಸ್ಪಷ್ಟೋಕ್ತಿ

ದ.ಆಫ್ರಿಕಾ ವಿರುದ್ಧ 2ನೇ ಟೆಸ್ಟ್ ಇಂದಿನಿಂದ: ಗೆಲ್ಲಲೇಬೇಕಾದ ಒತ್ತಡದಲ್ಲಿ ವಿರಾಟ್ ಪಡೆ P12

# ವರ್ಣರಂಜಿತ ಆಳ್ವಾಸ್ ವಿರಾಸತ್

## ನಾಗಾಲ್ಯಾಂಡ್ ರಾಜ್ಯಪಾಲ ಪಿ.ಬಿ. ಆಚಾರ್ಯ ಚಾಲನೆ | ರಾಜನ್ ಸಾಜನ್ ಮಿಶ್ರಾಗೆ ಪ್ರಶಸ್ತಿ ಪ್ರದಾನ





ಮೂಡುಬಿದಿರೆಯಲ್ಲಿ ಆಳ್ವಾಸ್ ವಿರಾಸತ್ ಗೆ ನಾಗಾಲ್ಯಾಂಡ್ ರಾಜ್ಯಪಾಲ ಬಿ.ವಿ.ಆಚಾರ್ಯ ಶುಕ್ರವಾರ ಚಾಲನೆ ನೀಡಿದರು. ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಉಪಸ್ಥಿತರಿದ್ದರು. ಸೇರಿದ ಜನಸ್ತೋಮ.

■ **ಸುಶಿಲೇಂದ್ರ ಕುಡುಪಾಡಿ,**
ಮೂಡುಬಿದಿರೆ

ಮೊನ್ನೆ ಮೊನ್ನೆ ತಾನೆ ನುಡಿಸಿರಿಯ ಮೂಲಕ ಸಾಹಿತ್ಯ ರಸದೌತಣದ ಕಂಪು ಹರಡಿದ ಜೈನಕಾಶಿ ಮೂಡುಬಿದಿರೆಯಲ್ಲಿ ಸಾಂಸ್ಕೃತಿಕ ಲೋಕದ ಸಂಭ್ರಮ ಆಳ್ವಾಸ್ ವಿರಾಸತ್ ಶುಕ್ರವಾರ ಇಳಿಸಂಜೆ ತೆರೆದುಕೊಂಡಿತು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವತಿಯಿಂದ ಆಯೋಜಿಸಲಾದ 24ನೇ ವರ್ಷದ ಆಳ್ವಾಸ್ ವಿರಾಸತ್ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಪುತ್ತಿಗೆಯ ವಿವೇಕಾನಂದ ನಗರ ವನಜಾಕ್ಷಿ ಕೆ. ಶ್ರೀಪತಿ ಭಟ್ ವೇದಿಕೆಯಲ್ಲಿ ಸಾಂಪ್ರದಾಯಿಕವಾಗಿ ಉದ್ಘಾಟನೆಗೊಂಡಿತು.

ಈಶಾನ್ಯ ರಾಜ್ಯ ಅಭಿವೃದ್ಧಿ ಗುರಿಯಾಗಲಿ ಶೇ.98ರಷ್ಟು ಅಂತಾರಾಷ್ಟ್ರೀಯ ಗಡಿ ಭಾಗದಿಂದ ಕೂಡಿರುವ ಈಶಾನ್ಯ ರಾಜ್ಯ ಬಲಗೊಳಿಸುವುದು ದೇಶದ ಮುಂದಿರುವ ಪ್ರಧಾನ ಸವಾಲಾಗಿದ್ದು, ಯುವ ಜನತೆ ಈಶಾನ್ಯ ರಾಜ್ಯ ಅಭಿವೃದ್ಧಿಯ ಗುರಿಯನ್ನು ಪ್ರಮುಖವಾಗಿಸಬೇಕು ಎಂದು ನಾಗಾಲ್ಯಾಂಡ್ ರಾಜ್ಯಪಾಲ ಪಿ.ಬಿ. ಆಚಾರ್ಯ ಹೇಳಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದ ಬಹುತೇಕ ರಾಜ್ಯಗಳು ಅಭಿವೃದ್ಧಿ ಹೊಂದುತ್ತಿದ್ದು, ಈಶಾನ್ಯ ರಾಜ್ಯ ಅಭಿವೃದ್ಧಿಗಾಗಿ ಪ್ರತಿಯೊಂದು ಶಿಕ್ಷಣ ಸಂಸ್ಥೆಗಳು ಅಲ್ಲಿನ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಕೈ ಜೋಡಿಸಬೇಕು ಎಂದರು. ತನ್ನ ಈ ಕೋರಿಕೆಯನ್ನು ಮನ್ನಿಸಿ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ನಾಗ ಬುಡಕಟ್ಟಿನ 20 ಹಾಗೂ ಅತಿ ಹಿಂದುಳಿದ ಪುರೋಹಿ ಜನಾಂಗದ 5 ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯವನ್ನು ಡಾ. ಮೋಹನ್ ಆಳ್ವ ಮಾಡಿದ್ದಾರೆ ಎಂದು ಶ್ಲಾಘಿಸಿದರು.

### ವಿರಾಸತ್ ಪ್ರಶಸ್ತಿ ಪ್ರದಾನ

ಪ್ರಸಿದ್ಧ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕರಾದ ಪದ್ಮಭೂಷಣ ಪಂಡಿತ್ ರಾಜನ್ ಸಾಜನ್ ಮಿಶ್ರಾ ಅವರಿಗೆ ಒಂದು ಲಕ್ಷ ರೂ. ನಗದು ಸಹಿತ ಆಳ್ವಾಸ್ ವಿರಾಸತ್ 2018 ಪ್ರಶಸ್ತಿ ಪ್ರದಾನ ಮಾಡಲಾಯಿತು.

**ಕಲೆಗಳಿಂದ ಮನಸ್ಸು ಬೆಸೆಯುವ ಕಾರ್ಯ:** ಪುರಾತನ ಕಾಲದಿಂದಲೂ ಕಲೆಗಳು ಮನಸ್ಸು ಬೆಸೆಯುವ ಕಾರ್ಯ ಮಾಡುತ್ತಿದ್ದು, ಆಳ್ವಾಸ್ ವಿರಾಸತ್ ಮೂಲಕ ಇಂದಿನ ಯುವ ಮನಸು ಬೆಸೆಯುವ ಕಾರ್ಯವಾಗುತ್ತಿದೆ ಎಂದರು.

**ದ್ವೇಷ ಮರೆತು ಒಂದಾಗಿ:** ಅಧ್ಯಕ್ಷತೆ ವಹಿಸಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮವಿಭೂಷಣ ಡಾ.ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿ, ಎಲ್ಲರೂ ದ್ವೇಷ ಮರೆತು ಒಂದಾಗಬೇಕು ಹಾಗೂ ಸಾಂಸ್ಕೃತಿಕವಾಗಿ ಒಗ್ಗೂಡುವಿಕೆಯಿಂದ ಪ್ರತಿಯೊಬ್ಬರಲ್ಲೂ ಪ್ರೀತಿ ಬೆಳೆಯುತ್ತದೆ ಎಂದರು.

**ಈಡೇರುತ್ತಿದೆ ಆಶಯ:** ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ದೇಶವಿದೇಶದ ಪ್ರಖ್ಯಾತ ಕಲಾವಿದರನ್ನು ಸ್ಥಳೀಯರು ನೋಡಬೇಕು, ಸೌಂದರ್ಯ ಪ್ರಜ್ಞೆಯುಳ್ಳ ಪ್ರೇಕ್ಷಕ ವರ್ಗ ಸೃಷ್ಟಿಯಾಗಬೇಕು, ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಕಲೆ ಕಲಿಯುವ ಆಸೆ ಬೆಳೆಯಬೇಕು ಎಂಬ ಸದಾಶಯದೊಂದಿಗೆ ಪ್ರಾರಂಭಿಸಿದ ಆಳ್ವಾಸ್ ವಿರಾಸತ್‌ನ ಆಶಯ ಈಡೇರುತ್ತಿದೆ ಎಂದರು.

ರಾಜ್ಯಪಾಲರ ಪತ್ನಿ ಕವಿತಾ ಆಚಾರ್ಯ, ಸಂಸದ ನಳಿನ್ ಕುಮಾರ್ ಕಟೀಲ್, ಶಾಸಕ ಅಭಯಚಂದ್ರ ಜೈನ್, ವಿಧಾನ ಪರಿಷತ್ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ರಾಜ್ಯ ಸಹಕಾರ ಮಾರಾಟ ಮಹಾಮಂಡಲ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್, ಯೇನೆಪೋಯ ಸಮೂಹ ಸಂಸ್ಥೆ ಅಧ್ಯಕ್ಷ ಅಬ್ದುಲ್ಲಾ ಕುಂಞ, ರಾಜೀವ್ ಗಾಂಧಿ ಆರೋಗ್ಯ ವಿವಿ ಕುಲಪತಿ ಡಾ.ಎಂ.ಕೆ.ರಮೇಶ್, ಯುಪಿಸಿಎಲ್ ಅದಾನಿ ಗ್ರೂಪ್‌ನ ಕಾರ್ಯನಿರ್ವಹಣಾಧಿಕಾರಿ ಕಿಶೋರ್ ಆಳ್ವ, ಮಾಜಿ ಸಚಿವ ಕೆ. ಅಮರನಾಥ ಶೆಟ್ಟಿ, ಜಯಶ್ರೀ ಅಮರನಾಥ ಶೆಟ್ಟಿ, ಬರೋಡ ತುಳು ಕೂಟ ಅಧ್ಯಕ್ಷ ಶಶಿಧರ ಶೆಟ್ಟಿ, ಸುರೇಶ್ ಶೆಟ್ಟಿ ಗುರ್ಮೆ, ಕೆ.ಶ್ರೀಪತಿ ಭಟ್ ಮೂಡುಬಿದಿರೆ, ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಂಜುನಾಥ ಭಂಡಾರಿ, ಹರೀಶ್ ಶೆಟ್ಟಿ ಐಕಳ, ಪುತ್ತಿಗೆ ಗ್ರಾ.ಪಂ. ಅಧ್ಯಕ್ಷೆ ಮೋಹಿನಿ ಶೆಟ್ಟಿ, ಮುಸ್ತಫ ಎಸ್.ಎಂ.ಮಂಗಳೂರು ಉಪಸ್ಥಿತರಿದ್ದರು. ಪದ್ಮನಾಭ ಶೆಣೈ ಪ್ರಶಸ್ತಿ ಪತ್ರ ವಾಚಿಸಿದರು. ದೀಪಾ ಕೊಟ್ಟಾರಿ ನಿರೂಪಿಸಿದರು.

### ಕೆಕೆ ಹಾಡಿಗೆ ವಿರಾಸತ್ ಪ್ರೇಕ್ಷಕರು ಫಿದಾ



ಕೆ.ಕೆ. ಎಂದೇ ಪ್ರಖ್ಯಾತರಾದ ಖ್ಯಾತ ಹಾಡುಗಾರ ಕೃಷ್ಣ ಕುಮಾರ್ ಕುನ್ನತ್ ಆಳ್ವಾಸ್ ವಿರಾಸತ್ ನ ಪ್ರಥಮ ದಿನ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದ ಮೆರುಗನ್ನು ತನ್ನ ಹಾಡಿನ ಮೂಲಕ ನೂರ್ಮಡಿಗೊಳಿಸಿದರು. ಶುಕ್ರವಾರ ಸಂಜೆ ಆರಂಭಗೊಂಡ ವಿರಾಸತ್‌ನ ಸಭಾ ಕಾರ್ಯಕ್ರಮದ ಬಳಿಕ ವೇದಿಕೆಯಲ್ಲಿ ಮಿಂಚಿದ ಕೆ.ಕೆ. ಅವರ ಹಾಡಿಗೆ ನೆರೆದ ಪ್ರೇಕ್ಷಕ ವರ್ಗದಲ್ಲಿ ಸಂತಸದ ಕೇಕೇ ಹಾಕುವಂತೆ ಮಾಡಿತು. ಪ್ರತಿಯೊಂದು ಹಾಡಿನ ಆರಂಭ ಹಾಗೂ ಕೊನೆಯಲ್ಲಿ ಪ್ರೇಕ್ಷಕರ ಕರತಾಡನದ ಜತೆಗೆ ಹೋ... ಎಂಬ ಸಂತಸದ ಕೂಗು ಕೆ.ಕೆ. ಅವರಲ್ಲಿ ಇನ್ನಷ್ಟು ಹುಮ್ಮಸ್ಸು ಹುಟ್ಟುಹಾಕುತ್ತಿತ್ತು. ಕ್ಯಾ ಮುಜೆ ಪ್ಯಾರ್ ಹೆ ಎಂಬ ಹಾಡಿನೊಂದಿಗೆ ಸಂಗೀತ ರಸಸಂಜೆ ಆರಂಭಿಸಿದ ಕೆ.ಕೆ. ಅವರು ಪ್ರತಿಯೊಂದು ಹಾಡಿಗೂ ವೇದಿಕೆಯ ಉದ್ದಗಲಕ್ಕೂ ಕುಣಿದು ಕುಪ್ಪಳಿಸಿದರು.